**ಇಂದು ದಿಃ24-09-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾದಿ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಯನ್ನು ಮುಕ್ತಾಯಗೊಳಿರುತ್ತಾರೆ.**

ಪಾಟೀ ಸವಾಲು : ಶ್ರೀ ಬಿ. ಎಂ.ಎಸ್ ವಕೀಲರಿಂದ ಪ್ರತಿವಾದಿ ಪರ:

ನಾನು 1988 ರಲ್ಲಿ ಕೆಲಸಕ್ಕೆ ಸೇರಿದ್ದು ಎಂದರೆ ಸರಿ. ನಾನು ಮೊದಲು ಹಾಸದಲ್ಲಿ ಮೊದಲು ಇದ್ದೇನು. ನಂತರ ತರಿಕೇರಿಯಲ್ಲಿ 1991 ಗೆ ಹೋದೆನು. 1998 ರಲ್ಲಿ ಚನ್ನರಾಯಪಟ್ಟಣಕ್ಕೆ ವರ್ಗಾವಣೆಯಾಯಿತು. ನಂತರ 2003 ರಲ್ಲಿ ಪ್ರಮೋಷನ್ ಆಗಿ ಹಾಸನಕ್ಕೆ ಹೋದೇನು. ಅಲ್ಲಿ ನನ್ನ ಪೂರ್ಣ ಸೇವೆ ಆಗಿರುತ್ತದೆ. ನಾನು ಸೇಲ್ ಆಪೀಸರ್ ಎಂದು ಸಹಕಾರ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆನು. ನಿ.ಪಿ-18 ರಲ್ಲಿ ನಾನು ನೀಡಿದ ಮಾಹಿತಿ ಪ್ರಕಾರ ಬರೆದಿದ್ದಾರೆ ಎಂದರೆ ಸರಿ. ನಿ.ಪಿ-18 ರಲ್ಲಿ ಬರೆದ ಮಾಹಿತಿ ಸರಿ ಇದೆ. ನಿ.ಪಿ-18 ರ ಪ್ರಕಾರ 2 ಮತ್ತು 3 ನೇ ವಾದಿಯರಿಗೆ ನನ್ನ ಗ್ಯಾಚುಟಿ ಹಣ ಸೇರ ಬೇಕು ಎಂದು ಇದೆ ಎಂದರೆ ಸರಿ. ನಿ.ಪಿ-18 ರಲ್ಲಿ ನನಗೆ ಕುಟುಂಬ ಇಲ್ಲ ಎಂದು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಸಿ.ರುದ್ರಪ್ಪ ಇದೆ ಎಂದು ಹೇಳುತ್ತಾರೆ. ನನ್ನ ಕುಟುಂಬ ಪಿಂಚಣಿಗೆ ಮತ್ತು ಇತರೆ ಸೇವಾ ಸೌಲಭ್ಯಗಳಿಗೆ ನನ್ನ ಗಂಡನನ್ನು ನಾನು ನಾಮನಿರ್ದೇಶನ ಮಾಡಿದ್ದೆನು. ಈ ಕುರಿತು ನಾನು ದಾಖಲೆ ಹಾಜರುಪಡಿಸಿಲ್ಲ. ನಾನು ಕೆಲಸಕ್ಕೆ ಸೇರಿದ 4 ವರ್ಷಗಳ ನಂತರ ನಿ.ಪಿ-18 ರಂತೆ ಮಾಹಿತಿ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ನನ್ನ ನೇಮಕ ಆದ ನಂತರ ಕಚೇರಿಯಲ್ಲಿ ಸದರಿ ವಿವರಗಳನ್ನು ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಾನು ಕೆಲಸಕ್ಕೆ ಸೇರಬೇಕಾದರೆ ನನ್ನ ಗಂಡನ ಕುರಿತು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 4 ವರ್ಷಗಳ ನಂತರ ನಿ.ಪಿ-18 ರಂತೆ ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-18 ರಂತೆ 1992 ರಲ್ಲಿ ಆ ವಿವರ ನಮೂದು ಇದ್ದು, ನಂತರ ನಾನು

ರುದ್ರಪ್ಪ ಇವರ ಹೆಸರನ್ನು ಕುಟುಂಬ ಪಿಂಚಣಿ ಮತ್ತು ಉಳಿದ ಸೇವಾ ಸೌಲಭ್ಯಗಳಿಂದ ಕೈಬಿಡಲು ಅರ್ಜಿ ಕೊಟ್ಟಿದ್ದೆನು ಎಂದರೆ ಸರಿಯಲ್ಲ. ನಾನು ಸೇವೆಯಲ್ಲಿದ್ದಾಗ ಮತ್ತು ರುದ್ರಪ್ಪ ತೀರಿಕೊಳ್ಳುವವರೆಗೂ, ರುದ್ರಪ್ಪನ ಹೆಸರು ನನ್ನ ಸೇವಾ ದಾಖಲೆಗಳಲ್ಲಿ ನಮೂದು ಇದ್ದ ಬಗ್ಗೆ ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ರುದ್ರಪ್ಪ ನನ್ನ ಗಂಡ ಅಲ್ಲದೇ ಇರುವ ಕಾರಣ ನಾನು ಕೆಲಸಕ್ಕೆ ಸೇರಬೇಕಾದರೆ ಆತನ ಹೆಸರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ-17 ರಲ್ಲಿ ರುದ್ರಪ್ಪ ಇವರ ಹೆಸರು ಇಲ್ಲ ಎಂದರೆ ಸರಿ. ಸಾಕ್ಷಿ ಎ.ಜಿ ಕಚೇರಿಗೆ ಹೋಗಬೇಕಾದರೆ ರುದ್ರಪ್ಪ ಇವರ ಮರಣ ಆಗಿತ್ತು ಎಂದು ಹೇಳುತ್ತಾರೆ.

ಸಾಕ್ಷಿಗೆ ನಿ.ಪಿ-9 ನ್ನು ತೋರಿಸಿ ನಾನು ದಿನಾಂಕಃ06-08-2019 ರಂದು ಕಂದಾಯ ಇಲಾಖೆಗೆ ತಕರಾರು ಸಲ್ಲಿಸಿದ್ದೆನು. ನಿ.ಪಿ-9 ರಲ್ಲಿ ದಿನಾಂಕ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ ಇಸವಿ, ತಿಂಗಳು ಹಾಕಿದ್ದೇನೆ ಎಂದು ಹೇಳುತ್ತಾರೆ. ನಾನು ಬೆಳಿಗ್ಗೆ 11 ಘಂಟೆಗೆ ನಿ.ಪಿ-9 ನ್ನು ಸಲ್ಲಿಸಿದ್ದೆನು. ನಿ.ಪಿ-9 ರ ಅರ್ಜಿಯನ್ನು ನಾನು ಬರೆದಿರುತ್ತೇನೆ. ಎಡಭಾಗದ ಹೆಸರು, ವಿಳಾಸವನ್ನು ನನ್ನ ಮಗಳು ಬರೆದಳು. ಫೋನ್ ನಂಬರ್ ನನ್ನ ಮಗಳದು ಇರುತ್ತದೆ. ಈ ಅರ್ಜಿಯನ್ನು ನಾನು ಕೊಟ್ಟಿಲ್ಲ ಎಂದರೆ ಸರಿಯಲ್ಲ, ನನ್ನ ಪರವಾಗಿ ಬೇರೆ ಯಾರೋ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಸ್ವೀಕೃತಿಯ ಅರ್ಜಿಯ ದೃ.ನಕಲನ್ನು ತೋರಿಸಿ ಅದು ನನಗೆ ನೀಡಿದ ಸ್ವೀಕೃತಿಯ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ನಿ.ಡಿ-1 ಎಂದು ಗುರುತಿಸಲಾಯಿತು. ನಿ.ಡಿ-1 ರಲ್ಲಿ ಏನು ದಾಖಲೆ ನೀಡಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಅವರು ಬರೆದಿಲ್ಲ ಎಂದು ಹೇಳುತ್ತಾರೆ. ನಾನು ತಕರಾರು ಅರ್ಜಿಯ ಜೊತೆಗೆ ಯಾವುದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ.

ಹರಿಹರದ ತಹಶೀಲ್ದಾರರಿಂದ ನಾನು ನಿ.ಪಿ-23 ಪ್ರಮಾಣ ಪತ್ರದ ಮುಖಾಂತರ ವಂಶವೃಕ್ಷವನ್ನು ಪಡೆದಿದ್ದೇನೆ. ಸದರಿ ವಂಶವೃಕ್ಷವನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನಾನು ಯಾವುದೇ ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರ ಇವರು ನಾನು ರುದ್ರಪ್ಪ ಇವರ ಹೆಂಡತಿ ಅಲ್ಲದೇ ಇರುವ

ಕಾರಣ ನನಗೆ ಯಾವುದೇ ವಂಶವೃಕ್ಷ ನೀಡಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ:16-11-2019 ರಂದು ನಾನು ಚನ್ನರಾಯಪಟ್ಟಣದಲ್ಲಿ ಒಂದು ವಂಶವೃಕ್ಷವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಈ ವಂಶವೃಕ್ಷವನ್ನು ನಾನು ಹರಿಹರ ತಹಶೀಲ್ದಾರ ಇವರಿಗೆ ಖಾತೆ ಬದಲಾವಣೆಗೆ ಕೊಟ್ಟಿದ್ದೆನು ಎಂದರೆ ಸರಿ. ನಾನು ಹರಿಹರ ತಹಶೀಲ್ದಾರರವರು ವಂಶವೃಕ್ಷ ಕೊಡದೇ ಇದ್ದಾಗ ನನ್ನ ಪ್ರಭಾವ ಬೀರಿ ಚನ್ನರಾಯಪಟ್ಟಣದಲ್ಲಿ ಕಾನೂನು ಬಾಹಿರವಾಗಿ ವಂಶವೃಕ್ಷ ಪಡೆದುಕೊಂಡೆನು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ನಿವೃತ್ತ ಕಂದಾಯ ನಿರೀಕ್ಷಕ ಹನುಮಂತಪ್ಪ ಇವರ ಪರಿಚಯ ಇಲ್ಲ. ನಾನು ಮತ್ತು ಸದರಿ ಹನುಮಂತಪ್ಪ ಸೇರಿ ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಿ ಈ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಹನುಮಂತಪ್ಪ ಇವರು ಕಂದಾಯ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಪಹಣಿಗಳಲ್ಲಿ ನನ್ನ ಹೆಸರು ದಾಖಲಾಗುವ ಹಾಗೇ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಹನುಮಂತಪ್ಪ ಮತ್ತು ಪ್ರತಿವಾದಿ ಸೇರಿ ಈ ರೀತಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಈ ದಾವೆಯಲ್ಲಿ ಹಾಜರುಪಡಿಸಿದ ತಮ್ಮ ಮತ್ತು ತಮ್ಮ ಮಗಳ ಆದಾರ್ ಕಾರ್ಡ್ ಗಳ ಜೆರಾಕ್ಸ ಪ್ರತಿಗಳನ್ನು ತೋರಿಸಿ ಕೇಳಲು, ಅವು ನಮ್ಮವು ಇರುತ್ತವೆ ಎಂದು ಸಾಕ್ಷಿ ಹೇಳುತ್ತಾರೆ. ಆದಾರ್ ಕಾರ್ಡ್ ನಲ್ಲಿ ಯಾವ ವರ್ಷ ರುದ್ರಪ್ಪ ಇವನ ಹೆಸರು ಸೇರಿಸಿದಿರಿ ಎಂದರೆ ಸಾಕ್ಷಿ ಮೊದಲು ನನ್ನ ತಂದೆಯ ಹೆಸರು ಇತ್ತು ಎಂದು ಹೇಳುತ್ತಾರೆ. ರುದ್ರಪ್ಪ ಈತನ ಹೆಸರನ್ನು ದಿನಾಂಕ:11-02-2021 ರಂದು ಸೇರಿಸಿರುತ್ತೇನೆ ಎಂದರೆ ಸಾಕ್ಷಿ ಮೊದಲೇ ಮಾಡಿಸಿದ್ದೆನು ಎಂದು ಹೇಳುತ್ತಾರೆ. ಆ ಕಾರಣದಿಂದ ನಾನು 2021 ರ ಮೊದಲಿನ ಆದಾರ್ ಕಾರ್ಡ್ ನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿ.ಪಿ-22 ರಲ್ಲಿ ರುದ್ರಪ್ಪನ ಹೆಂಡತಿಯ ಹೆಸರು ಸರೋಜ ಎಂದು ಇದೆ ಎಂದರೆ ಸರಿ. ಸಾಕ್ಷಿ ಪ್ರತಿವಾದಿ ಆ ರೀತಿ ಬರೆಯಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ಈ ಕುರಿತು ಯಾವುದೇ ಕ್ರಮಕೈಗೊಳ್ಳಲಿಲ್ಲ. ಸರೋಜ ಇವಳು ರುದ್ರಪ್ಪ ಈತನ ನಿಜವಾದ ಹೆಂಡತಿ ಇದ್ದ

ಕಾರಣ ನಾನು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದರೆ ಸರಿಯಲ್ಲ.

ನಾನು ವಾದಪತ್ರದಲ್ಲಿ ದಾವಾ ಆಸ್ತಿ 3 ವರ್ಷಗಳಿಂದ ನನ್ನ ಸ್ವಾಧೀನದಲ್ಲಿ ಇದೆ ಎಂದು ತಿಳಿಸಿದ್ದು, ಯಾವ ದಿನಾಂಕದಂದು ನಿಮ್ಮ ಸ್ವಾಧೀನಕ್ಕೆ ಬಂತು ಎಂದರೆ ಸಾಕ್ಷಿ ನನ್ನ ಗಂಡನ ತೀರಿಕೊಂಡ ನಂತರ ನಾವು ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಜಮೀನಿನ ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಪೋಲೀಸ್ ಫಿರ್ಯಾದಿ ಕೊಡುವ ಎರಡು ದಿನ ಮೊದಲು ಅಂದರೆ ದಿನಾಂಕಃ03-08-2024 ರ ಎರಡು ದಿನ ಮೊದಲು ನಾನು ಎಲೆಹೊಳೆ ಗ್ರಾಮದಲ್ಲಿ ಇದ್ದೆನು ಎಂದರೆ ಸಾಕ್ಷಿ ನಾನು ಎಲೆಹೊಳೆ ಗ್ರಾಮದಲ್ಲಿಯೇ ಇದ್ದೆನು ಎಂದು ಹೇಳುತ್ತಾರೆ. ನಾನು ಎಲೆಹೊಳೆ ಗ್ರಾಮದಲ್ಲಿ ಇದ್ದ ಬಗ್ಗೆ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅದು ನನ್ನ ಗಂಡನ ಮನೆ ಏನು ದಾಖಲೆ ಕೊಡಬೇಕು ಎಂದು ಹೇಳುತ್ತಾರೆ. ಸಾಕ್ಷಿಗೆ ವಾದಿ ಹಾಜರುಪಡಿಸಿದ ಪೋಟೋಗಳನ್ನು ತೋರಿಸಿ ಅವುಗಳನ್ನು ದಿನಾಂಕಃ05-08-2024 ರಂದು ತೆಗೆದಿದ್ದು ಎಂದರೆ ಸರಿ. ಸದರಿ 4 ಪೋಟೋಗಳನ್ನು ಪ್ರತಿವಾದಿಯ ಪರವಾಗಿ ನಿ.ಡಿ-2 ಎಂದು ಗುರುತಿಸಲಾಯಿತು. ನಿ.ಡಿ-2 ರಲ್ಲಿ ನಾವು ನಿಂತಿರುವ ನಾಟಿ ಹಚ್ಚಿದ ಜಮೀನು ರುದ್ರಪ್ಪ ಇವನದು ಮತ್ತು ಪಕ್ಕದ ಜಮೀನು ನನ್ನ ಮೈದುನದು ಎಂದರೆ ಸರಿ. ಈ ಪೋಟೋಗಳಲ್ಲಿ ನನ್ನಮೈದುನ ಹನುಮಂತಪ್ಪ ಇಲ್ಲ ಎಂದರೆ ಸರಿ.

ಬೆಳಗಿನ ನ್ಯಾಯಾಲಯದ ಅವಧಿ ಮುಗಿದ ಕಾರಣ, ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ **3** ಘಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**

ಇಂದು **ದಿ:24-09-2024 ರಂದು ಸಾಕ್ಷಿಯನ್ನು ಪುನಃ** ಮಧ್ಯಾಹ್ನ **3** ಘಂಟೆಗೆ **ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ** ಪಾಟೀ ಸವಾಲು**:** ಶ್ರೀ ಬಿ**.**ಎಂ**.**ಎಸ್ ವಕೀಲರಿಂದ ಪ್ರತಿವಾದಿ ಪರ**:**

ಈ ಪೋಟೋಗಳನ್ನು ತೆಗೆದ ನಂತರ ಜಮೀನಿಗೆ ಪ್ರತಿವಾದಿ ಬಂದರು ಎಂದರೆ ಸಾಕ್ಷಿ ಬಂದರು ಅವರು ಯಾರು ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಬಂದು ಗಲಾಟೆ ಮಾಡಿದರು. ಜಮೀನು ನಮ್ಮದು ಎಂದು ಗಲಾಟೆ ಮಾಡಿದರು. ಜಮೀನಿನ ಬದುವಿನಲ್ಲಿ ಆ ದಿನ ಪೂಜೆ ಮಾಡಿದೆವು ಎಂದರೆ ಸರಿ. ಸಾಕ್ಷಿ ನಮ್ಮ ಜಮೀನು ಇದ್ದ ಕಾರಣ ಮಾಡಿದೆವು ಎಂದು ಹೇಳುತ್ತಾರೆ. ನಂತರ ನಾನು, ನನ್ನ ಮಗಳು ಮತ್ತು ಅಳಿಯ ಎಲೆಹೊಳೆ ಗ್ರಾಮಕ್ಕೆ ಹೋದೆವು ಎಂದರೆ ಸರಿ. ಆ ದಿನ ರುದ್ರಪ್ಪ ಇವರ ಸಹೋದರಿ ಗುತ್ತೆಮ್ಮ ನಮ್ಮ ಜೊತೆಗೆ ಇದ್ದರು ಎಂದರೆ ಸರಿಯಲ್ಲ. ಪೋಟೋಗಳನ್ನು ನನ್ನ ಮಗಳ ಮೊಬೈಲ್ ನಿಂದ ತೆಗೆದೆವು. ಆಗಲೇ ಭತ್ತ ನಾಟಿ ಮಾಡಿದ ಹೊಲದಲ್ಲಿ ನಾವು ಹೋಗಿ ನಾಟಿ ಮಾಡುವ ಹಾಗೇ ಪೋಟೋ ತೆಗಿಸಿಕೊಂಡು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಂತರ ಈ ಪೋಟೋಗಳನ್ನು ಸೃಷ್ಠಿ ಮಾಡಿಕೊಂಡು ಮಲೆಬೆನ್ನೂರು ಠಾಣೆಯಲ್ಲಿ 5 ನೇ ತಾರೀಖು ಸಂಜೆ ದೂರು ಕೊಟ್ಟೆವು ಎಂದರೆ ಸಾಕ್ಷಿ ದೂರು ಕೊಟ್ಟಿವು ಎಂದು ಹೇಳುತ್ತಾರೆ. ಪಹಣಿಯಲ್ಲಿ ಪ್ರತಿವಾದಿಯ ಹೆಸರು ಇದ್ದ ಕಾರಣ ಪಿರ್ಯಾದಿಯ ಜೊತೆಗೆ ಹಳೆಯ ಮುಟೇಷನ್ ಪ್ರತಿಯನ್ನು ಹಚ್ಚಿದೆವು ಎಂದರೆ ಸರಿಯಲ್ಲ.

ರುದ್ರಪ್ಪ ಇವರ ಹೆಸರಿಗೆ 3 ಎಕರೆ 24 ಗುಂಟೆ ಹೊರತುಪಡಿಸಿ ಬೇರೆ ಆಸ್ತಿ ಇರಲಿಲ್ಲ. ರುದ್ರಪ್ಪ ಇವರ ಹೆಸರಿಗೆ ಬೇರೆ ಆಸ್ತಿ ಇದ್ದರೂ ನಾನು ಹೆಂಡತಿ ಅಲ್ಲದೇ ಇರುವ ಕಾರಣ ನನಗೆ ಅವುಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಸಾಕ್ಷಿ ತನ್ನ ತಮ್ಮನಿಗೂ ಸಹ ಹಿಸ್ಸೆಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ರುದ್ರಪ್ಪ ಈತನ ತಮ್ಮ ಹನುಮಂತಪ್ಪ ಮತ್ತು ಸಹೋದರಿ ಗುತ್ತೆಮ್ಮ ಒಂದೇ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ. ಇವರು ವಾಸ ಆಗಿರುವ ಮನೆಯ ಬಲಗಡೆಗೆ ಪ್ರತಿವಾದಿ ವಾಸ ಇದ್ದಾರೆ ಎಂದರೆ ಗೊತ್ತಿಲ್ಲ. ನನಗೆ ಪ್ರತಿವಾದಿ ಯಾರು ಎಂದು ಗೊತ್ತಿಲ್ಲ. ನನಗೆ ನಾಗಮಣಿ ಯಾರು ಎಂದು ನನಗೆ ಗೊತ್ತಿಲ್ಲ. ಆಕೆ ನಮ್ಮ ಕುಟುಂಬದವಳು ಇರುವುದಿಲ್ಲ. ರುದ್ರಪ್ಪ ಎಲೆಹೊಳೆ ಗ್ರಾಮದವರು ಎಂದರೆ ಸರಿ. ನಾನು ರುದ್ರಪ್ಪ ಇವನ ಜೊತೆಗೆ ಎಲೆಹೊಳೆ ಗ್ರಾಮದಲ್ಲಿ ವಾಸ ಇದ್ದ ಬಗ್ಗೆ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿ.ಪಿ-2 ಪೋಟೋಗಳ ನೆಗಟೀವ್ ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ 1985 ರಲ್ಲಿ ಮದುವೆಯಾಗಿದ್ದು ಇಲ್ಲ ಎಂದು ಹೇಳುತ್ತಾರೆ. ಸದರಿ ಪೋಟೋಗಳನ್ನು ತೆಗೆದ ಪೋಟೋಗ್ರಾಫರ್ ರನ್ನು ಸಾಕ್ಷಿ ಮಾಡಿಸಲು ಈಗ ಆಗುವುದಿಲ್ಲ. ಪೋಟೋಗಳನ್ನು ನಾನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ-1 ರಲ್ಲಿ ನಮೂದು ಇರುವ ಎನ್.ಆರ್. ಸುರೇಶ್ ಮೊದಲನೆಯ ಜೋಡಿ ನನ್ನ ಅಣ್ಣ ಎಂದರೆ ಸರಿ. ನಿ.ಪಿ-1 ರಲ್ಲಿ ವಿಜ್ಞಾಪನೆ ಎಂಬುದರಲ್ಲಿ ನನ್ನ ಅಣ್ಣನ ಬೀಗರ ಹೆಸರು ಮಾತ್ರ ಇದೆ ಎಂದರೆ ಸರಿ. ಆಗಮನ ಅಭಿಲಾಶೆಗಳು ಎಂದು ಇರುವುದರಲ್ಲಿ ನನ್ನ ಅಣ್ಣನ ಬೀಗರ ಹೆಸರು ಮಾತ್ರ ಇದೆ ಎಂದರೆ ಸಾಕ್ಷಿ ರಾಮಚಂದ್ರಪ್ಪ ನನ್ನ ತಂದೆ ಮತ್ತು ಭೀಮಮ್ಮ ನನ್ನ ತಾಯಿಯ ಹೆಸರು ಇದೆ ಎಂದು ಹೇಳುತ್ತಾರೆ. ನಿ.ಪಿ-1 ರಲ್ಲಿ ರುದ್ರಪ್ಪನ ಕುಟುಂಬದವರ ಹೆಸರು ಹಾಗೂ ವಿವರ ಎಲೆಹೊಳೆ ಗ್ರಾಮದವರು ಎಂದು ಇಲ್ಲ ಎಂದರೆ ಸರಿ. ನಿ.ಪಿ-1 ನ್ನು 2 ನೇ ಜೋಡಿ ಎಂದು ನನ್ನ ಮತ್ತು ರುದ್ರಪ್ಪನ ಹೆಸರನ್ನು ಸೇರಿಸಿ, ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ರುದ್ರಪ್ಪನ ಹೆಂಡತಿ ಎಂದು ತೋರಿಸಲು ನಾನು ಲಗ್ನಪತ್ರಿಕೆ, ಪೋಟೋ

ಮತ್ತು ಆದಾರ್ ಕಾರ್ಡ್ ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಆರೋಗ್ಯ ವಿಮೆಯ ದಾಖಲೆಗಳಲ್ಲಿ ನಾನು ನನ್ನ ಗಂಡನನ್ನು ನಾಮ ನಿರ್ದೇಶನ ಮಾಡಿದ್ದೇನು. ಎಲ್.ಐ.ಸಿ ಬಾಂಡ್ ಮತ್ತು ಪಾಸ್ ಪುಸ್ತಕಗಳಲ್ಲಿಯೂ ಅವರ ನಾಮೆ ನಿರ್ದೇಶನ ಮಾಡಿದ್ದೇನು. ನಾನು ಆತನನ್ನು ಈ ಯಾವುದೇ ದಾಖಲೆಗಳಲ್ಲಿ ನಾಮ ನಿರ್ದೇಶನ ಮಾಡದೇ ಇರುವ ಕಾರಣ ನಾನು ಈ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ರುದ್ರಪ್ಪ ನನ್ನ ಗಂಡ ಅಲ್ಲದೇ ಇರುವ ಕಾರಣ, ಈ ಯಾವುದೇ ದಾಖಲೆಗಳಲ್ಲಿ ನನ್ನ ಗಂಡನ ಹೆಸರು ಇಲ್ಲ ಎಂದರೆ ಸರಿಯಲ್ಲ. ರುದ್ರಪ್ಪನ ಹೆಸರಿನಲ್ಲಿ ಬ್ಯಾಂಕ್ ಖಾತೆ, ವಿಮೆ ಇತ್ತು ಆದರೆ ಅವು ಮುಕ್ತಾಯಗೊಂಡಿವೆ. ನನ್ನನ್ನು ರುದ್ರಪ್ಪ ನಾಮನಿ ಎಂದು ಮಾಡಿದ್ದರು. ಒಂದು ವೇಳೆ ನನ್ನನ್ನು ನಾಮನಿ ಮಾಡಿದ್ದರೆ ನಾನು ಈ ದಾಖಲೆಗಳನ್ನು ಹಾಜರುಪಡಿಸಿಸುತ್ತಿದ್ದೇನು ಎಂದರೆ ಸರಿಯಲ್ಲ.

ರುದ್ರಪ್ಪನ ಎಲ್ಲಾ ದಾಖಲೆಗಳಲ್ಲಿ ಆತನ ನಿಜವಾದ ಹೆಂಡತಿ ಸರೋಜ ಇವಳ ಹೆಸರು ದಾಖಲು ಇರುವ ಕಾರಣ, ನಾನು ಈ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಸನ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾರಣ ರುದ್ರಪ್ಪ ಎಲೆಹೊಳೆಯಲ್ಲಿ ಕೃಷಿ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಬಂದು ಹೋಗಿ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಾನು ಆತನ ಖಾತೆಗೆ ಹಣ ಹಾಕಿಲ್ಲ, ಸಾಕ್ಷಿ ಬಂದಾಗ ಜಮೀನಿಗೆ ಎಂದು ಹಣಕೊಡುತ್ತಿದ್ದೆ ಎಂದು ಹೇಳುತ್ತಾರೆ. ರುದ್ರಪ್ಪ ನನ್ನ ಖಾತೆಗೆ ಯಾವತ್ತೂ ಹಣ ಹಾಕಿಲ್ಲ. ರುದ್ರಪ್ಪ ನನಗೆ ಬಟ್ಟೆ, ಆಭರಣ ವಸ್ತುಗಳನ್ನು ಕೊಡಿಸಿದ್ದಾರೆ ಈ ಕುರಿತು ದಾಖಲೆಗಳು ಇಲ್ಲ. ನಾನು ಆತನಿಗೆ ವಸ್ತು ಕೊಡಿಸಿದ ಬಗ್ಗೆ ನನ್ನ ಬಳಿ ದಾಖಲೆಗಳು ಇಲ್ಲ. ರುದ್ರಪ್ಪ ನನಗೆ ಆಸ್ಪತ್ರೆಗೆ ತೋರಿಸಿದ ಬಗ್ಗೆ ನನ್ನ ಬಳಿ ದಾಖಲೆಗಳು ಇಲ್ಲ. ರುದ್ರಪ್ಪ ನನ್ನ

ಗಂಡ ಅಲ್ಲ, ಆ ಕಾರಣದಿಂದ ನಾನು ಆತನ ಜೊತೆಗೆ ಸಂಸಾರ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಇರುವ ಸಹಿ ನನ್ನದು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿವರಗಳ ಮಾಹಿತಿ ಇದೆ. ನಾನು ಪ್ರತಿವಾದಿಯ ಹೆಸರು ತಹಶೀಲ್ದಾರ್ ಆದೇಶದ ಪ್ರಕಾರ ದಾಖಲಾದ ಬಗ್ಗೆ ಅದನ್ನು ಎ.ಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇನೆ. ಸದರಿ ಅಪೀಲ್ ನ ಅರ್ಜಿಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಎಲೆಹೊಳೆಯ ರುದ್ರಭೂಮಿಯಲ್ಲಿ ರುದ್ರಪ್ಪನ ಅಂತ್ಯಾ ಸಂಸ್ಕಾರ ಆಯಿತು. ನಾನು ಅಂತ್ಯಾ ಸಂಸ್ಕಾರಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಾನೇ ನಿಂತು ಮಾಡಿದ್ದೇನೆ ಎಂದು ಹೇಳುತ್ತಾರೆ. ಆತನ ತಿಥಿ ಕಾರ್ಯ ಎಲೆಹೊಳೆಯಲ್ಲಿ ಆಯಿತು. ಈ ಕುರಿತು ಯಾವುದೇ ಪತ್ರಿಕೆ ಮುದ್ರಿಸಿಲ್ಲ. ಸದರಿ ತಿಥಿ ಪತ್ರಿಕೆಯಲ್ಲಿ ಪ್ರತಿವಾದಿ ಮತ್ತು ಸರೋಜ ಇವರ ಹೆಸರು ಇದ್ದ ಕಾರಣ ಪತ್ರಿಕೆ ಮುದ್ರಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರೋಜ ಮತ್ತು ನಾಗಮಣಿ ಯಾರು ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**